# ಮನುಜಾಲಯ
## ಮನುಕುಲದ ಕಪ್ಪು ಚುಕ್ಕೆ




**ಮನುಕುಲದ ಅತ್ಯಂತ ಶೋಚನೀಯ ಚಾರಿತ್ರಿಕ ಘಟನೆ ಇದಾಗಿದ್ದು, ತೀರಾ ಇತ್ತೀಚಿನ ಇತಿಹಾಸದ ಒಂದು ಭಾಗವಾಗಿರುವುದು ಇನ್ನಷ್ಟು ಅವಮಾನಕರ ವಿಷಯವಾಗಿದೆ.**

■ **ಅನ್ವುಮಾನ್ ಯು. ಶಾಸ್ತ್ರೀ**





ಪ್ರಪಂಚದ ಇತಿಹಾಸದಲ್ಲಿ ಒಂದು ವಿಚಿತ್ರ ಹಾಗೂ ಅವಮಾನಕರ ಘಟನೆ ಎಂದರೆ ಪ್ರಾಣಿಗಳಂತೆ ಮನುಷ್ಯರ ಮೃಗಾಲಯ ! ಇದನ್ನು ಮನುಜಾಲಯ ಎನ್ನಬಹುದೇನೋ. ಉತ್ತರ ಅಮೆರಿಕ ಮತ್ತು ಯುರೋಪ್‌ನಲ್ಲಿ ಆರಂಭವಾದ ಇಂಥ ಮೃಗಾಲಯಗಳಲ್ಲಿ ಆಫ್ರಿಕಾದ ಗುಲಾಮರನ್ನು ಬೆತ್ತಲೆ ಅಥವ ಅರೆಬೆತ್ತಲೆಯಾಗಿ ಪಂಜರದಲ್ಲಿರಿಸಿ ಪ್ರದರ್ಶನ ನಡೆಸಲಾಗುತ್ತಿತ್ತು.

19ನೇ ಶತಮಾನದಲ್ಲಿ ಆರಂಭವಾದ ಇಂಥ ಮೃಗಾಲಯ ಕಲ್ಪನೆ 20ನೇ ಶತಮಾನದ ಮಧ್ಯದವರೆಗೆ ಪ್ರಚಲಿತದಲ್ಲಿತ್ತು. ಆಫ್ರಿಕಾದ ಮೂಲವಾಸಿಗಳನ್ನು ಅಪಹರಿಸಿ, ಬಂಧಿಸಿ ಪ್ರದರ್ಶನಕ್ಕಿಡುತಿದ್ದರು. ಬಂಧನದಲ್ಲಿದ್ದ ಈ ಜನರು, ಒಂದು ವರ್ಷದೊಳಗೇ ಸತ್ತುಹೋಗುತಿದ್ದರು. ಆದರೂ ಬಹಳ ಖ್ಯಾತಿಯನ್ನು ಪಡೆದ ಮಾನವ ಮೃಗಾಲಯಗಳಿಗೆ ಫ್ರಾನ್ಸ್, ಬೆಲ್ಜಿಯಂ, ಜರ್ಮನಿ ಮತ್ತು ಇತರ ಭಾಗಗಳಿಂದ ಆಫ್ರಿಕಾದ ಮೂಲವಾಸಿಗಳನ್ನು ನೋಡಲು ಬರುತ್ತಿದ್ದರು. 1889ರ ಪ್ಯಾರಿಸ್‌ನಲ್ಲಿ ನಡೆದ ವರ್ಲ್ಡ್ ಫೇರ್‌ನಲ್ಲಿ ಸುಮಾರು 400 ಬಂಧಿಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ಕೇವಲ ಆರು ತಿಂಗಳಲ್ಲಿ 34 ಮಿಲಿಯನ್ (3ಕೋಟಿ 40 ಲಕ್ಷ) ಕ್ಕಿಂತ ಹೆಚ್ಚು ಜನರನ್ನು ಈ ಪ್ರದರ್ಶನವನ್ನು ವೀಕ್ಷಿಸಿದ್ದರು.

ಈ ಪ್ರದರ್ಶನದಲ್ಲಿ ಕುಬ್ಜರು, ತೊನ್ನು ರೋಗಿಗಳು ಹಾಗು ಗೂನು ಬೆನ್ನಿನವರು ವಿಶೇಷ ಆಕರ್ಷಣೆಯಾಗಿದ್ದರು. ಈ ಮೂಲಕ ಬಿಳಿಯ ಜನಾಂಗದ ಶ್ರೇಷ್ಠತೆಯನ್ನು ಎತ್ತಿಹಿಡಿಯಲಾಗುತ್ತಿತ್ತು.